2001-02ನೇ ಸಾಲಿನಲ್ಲಿ ಒದಗಿಸಿರುವ ಸೌಲಭ್ಯ - ಆಧಾರ ಯೋಜನೆ

1. ಸಿ.ವಿ. ರಾಮನ್ ಬಿನ್ ಲೇಟ್ ಸಿ. ವೆಂಕಟನಾರಾಯಣ ಜೋಯಿಸ್, ಸಂ:254:1, ಬ್ರಾಹ್ಮಣರ ಬೀದಿ, 1ನೇ ವಾರ್ಡ್, ದೊ.ಬ.ಪುರ ಟೌನ್

2. ಮುನಿರಾಜ ಬಿನ್ ಮುನಿಕೃಷ್ಣಪ್ಪ, ದಂಡುದಾಸ ಕೊಡಿಗೇಹಳ್ಳಿ, ಮೆಳೇಕೋಟೆ ಅಂಚೆ, ದೊ.ಬ.ಪುರ ತಾ.

3. ನಾರಾಯಣಚಾರ್ ಬಿ. ಲಿಂಗಾಚಾರ್, ಸಂತರಾಯಪುರ ದೇವಾಲಯ ಮುಂಬಾಗ, ಕೋರ್ಟ್ ರಸ್ತೆ, ದೊ.ಬ.ಪುರ.

4. ಪ್ರೇಮಲತ ಬಿನ್ ಲೇಟ್ ಅಯ್ಯಪ್ಪ, ಸತ್ಯಮ್ಮ ದೇವಸ್ಥಾನದ ಹತ್ತಿರ, ಸೋಮೇಶ್ವರ ಬಡಾವಣೆ, ದೊ.ಬ.ಪುರ.

5. ಟಿ. ಶ್ರೀನಿವಾಸ್ ಬಿನ್ (ಬಿ. ನಾರಾಯಣಪ್ಪ) ತಿಮ್ಮಪ್ಪ, ಕುಂಟನಹಳ್ಳಿ, ಅರಳುಮಲ್ಲಿಗೆ ಅಂಚೆ.

ರಾಜ್ಯದಲ್ಲಿ ಹೊಸ ಅಂಗನವಾಡಿ ಕೇಂದ್ರಗಳ ಮಂಜೂರಾತಿ

1430 (1715) - ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು:

2. 2001-2002ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳಿಂದ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುವುದೇ? (ನಿಯಮಾವಳಿಗಳನ್ನು ನಮೂದಿಸುವುದು?

3. ಪ್ರಸಕ್ತ ಸಾಲಿನಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ಎಷ್ಟು ಹೊಸದಾಗಿ ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಮಂಜೂರು ಮಾಡಲಾಗಿದೆ?

4. ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟು ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಒದಗಿಸಲು ಹಾಗೂ ಅವುಗಳಿಗೆ ಕಟ್ಟಡ ಕಟ್ಟಲು ಮಂಜೂರು ಮಾಡಲಾಗಿದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

1. ರಾಜ್ಯದಲ್ಲಿ 40301 ಅಂಗನವಾಡಿ ಕೇಂದ್ರಗಳು ಇವೆ.

2. ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತಲ್ಲಿ ಕೇಂದ್ರಗಳನ್ನು ತೆರೆಯಲಾಗುವುದು.

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ 1000 ಜನಸಂಖ್ಯೆಗೆ ಒಂದು ಅಂಗನವಾಡಿ ಕೇಂದ್ರದಂತೆ ಮತ್ತು ಗುಡ್ಡಗಾಡು ಪ್ರದೇಶದಲ್ಲಿ 300 ಜನಸಂಖ್ಯೆ ಇದ್ದರೂ ಒಂದು ಅಂಗನವಾಡಿ ಕೇಂದ್ರ ತೆರೆಯಬೇಕೆಂಬ ನಿಯಮವಿದೆ.

3. ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರದ ವತಿಯಿಂದ 617 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ.

4. ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ 47 ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಮತ್ತು 2 ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಇಲಾಖಾ ಅನುದಾನವನ್ನು ಒದಗಿಸಲಾಗಿದೆ.

ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ ನಬಾರ್ಡ್‌ನಿಂದ ಮಂಜೂರಾಗಿರುವ ಹಣ

1431 (1788) - ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ನಬಾರ್ಡ್‌ನಿಂದ ಭೂ ಅಭಿವೃದ್ಧಿ ಬ್ಯಾಂಕ್ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್‌ಗೆ ಎಷ್ಟು ಹಣ ಬಿಡುಗಡೆಯಾಗಿದೆ. (ವರ್ಷವಾರು ಮಾಹಿತಿ ನೀಡುವುದು)

2. ಇದರಲ್ಲಿ ಬೆಂಗಳೂರು ಜಿಲ್ಲೆಗೆ ಎಷ್ಟು ಹಣ ಒದಗಿಸಲಾಗಿದೆ. ವ್ಯವಸಾಯ ಮತ್ತು ವ್ಯವಸಾಯೇತರ ಅಭಿವೃದ್ಧಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ.

3. ವ್ಯವಸಾಯಕ್ಕೆ ಒದಗಿಸಿರುವ ಹಣದಲ್ಲಿ ರೈತರಿಗೆ ವಿತರಣೆಯಾಗಿರುವ ಅಲ್ಪಾವಧಿ ಸಾಲ ಹಾಗೂ ಮಧ್ಯಮಾವಧಿ ಸಾಲಕ್ಕಾಗಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು)

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

1. ಕಳೆದ 3 ವರ್ಷಗಳಲ್ಲಿ ನಬಾರ್ಡ್‌ನಿಂದ ಭೂ ಅಭಿವೃದ್ಧಿ ಬ್ಯಾಂಕಿಗೆ (ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್) ಮತ್ತು ಅಪೆಕ್ಸ್ ಬ್ಯಾಂಕಿಗೆ ಬಿಡುಗಡೆಯಾಗಿರು ಹಣದ ವಿವರ ಈ ಕೆಳಕಂಡಂತಿವೆ (ರೂ. ಕೋಟಿಗಳಲ್ಲಿ)

		ಕಾಸ್ಕಾರ್ಡ್ ಬ್ಯಾಂಕ್	ಅಪೆಕ್ಸ್ ಬ್ಯಾಂಕ್
1.	1998-99	119.07	559.08
2.	1999-00	125.89	584.22
3.	2000-01	125.12	652.31

2. ಬೆಂಗಳೂರು ಜಿಲ್ಲೆಗೆ ಕಾಸ್ಕಾರ್ಡ್ ಬ್ಯಾಂಕಿನಿಂದ ಬಿಡುಗಡೆ ಮಾಡಿರುವ ಹಣದ ವಿವರ ಈ ಕೆಳಕಂಡಂತಿವೆ (ರೂ. ಕೋಟಿಗಳಲ್ಲಿ)